ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020 (ಭಾ-1) ದಿನಾಂಕ: 03-06-2020ರ **ಅನುಬಂಧ**

# ಲಾಕ್‌ಡೌನ್ ಸಡಿಲಿಕೆಯ (ತೆರವು-1) ಅವಧಿಯಲ್ಲಿ ಕರ್ನಾಟಕಕ್ಕೆ ಪ್ರಯಾಣಿಸುವ ಅಂತರರಾಜ್ಯ ಪ್ರಯಾಣಿಕರಿಗೆ ಶಿಷ್ಟಾಚಾರಗಳು

**3ನೇ ಜೂನ್ 2020 ರಿಂದ ಅನ್ವಯವಾಗುವ ತೆರವು-1ರ ಅವಧಿಯಲ್ಲಿ ಕರ್ನಾಟಕಕ್ಕೆ ಬರುವ ಮುನ್ನ ಅಂತರರಾಜ್ಯ ಪ್ರಯಾಣಿಕರು ಪಾಲಿಸಬೇಕಾದ ಶಿಷ್ಟಾಚಾರದ ಪ್ರಮುಖ ಅಂಶಗಳು ಈ ಕೆಳಗಿನಂತಿವೆ:**

1. **ಕರ್ನಾಟಕಕ್ಕೆ ಪ್ರವೇಶಿಸುವ ಮುನ್ನ ಎಲ್ಲಾ ಪ್ರಯಾಣಿಕರು ಸೇವಾ ಸಿಂಧು ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಸ್ವಯಂ ನೋಂದಣಿ ಮಾಡಿಕೊಳ್ಳುವುದು.**
   a. ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ತಪ್ಪದೇ ನೀಡುವುದು.
   b. ಅಂಗೀಕಾರದ ಅಗತ್ಯವಿರುವುದಿಲ್ಲ.
   c. ಕುಟುಂಬದ ಸದಸ್ಯರನ್ನು ಹೊರತುಪಡಿಸಿ, ಒಂದೇ ಮೊಬೈಲ್ ಸಂಖ್ಯೆಯನ್ನು ಒಂದಕ್ಕಿಂತ ಹೆಚ್ಚು ನೋಂದಣಿಗೆ ಬಳಸಲು ಅವಕಾಶವಿರುವುದಿಲ್ಲ.
   d. ವಾಣಿಜ್ಯ ವಹಿವಾಟುಗಳ ಉದ್ದೇಶಕ್ಕಾಗಿ ಪ್ರಯಾಣ ಮಾಡುವವರು ವಿವರಗಳನ್ನು (ಕರ್ನಾಟಕದಲ್ಲಿ ಭೇಟಿ ಮಾಡುವ ವ್ಯಕ್ತಿಯ ಹೆಸರು, ಮೊಬೈಲ್ ದೂರವಾಣಿ ಸಂಖ್ಯೆ ಮತ್ತು ವಿಳಾಸ ತಪ್ಪದೇ ನೀಡುವುದು) ಹಾಗೂ ಹಿಂದಿರುಗುವ ದಿನಾಂಕವನ್ನು ನೀಡುವುದು.
   e. ರಾಜ್ಯದ ಮುಖೇನ ಬೇರೆ ರಾಜ್ಯಗಳಿಗೆ ಪ್ರಯಾಣ ಮಾಡುವ ಪ್ರಯಾಣಿಕರು, ಪ್ರಯಾಣ ಮಾಡುವ ರಾಜ್ಯದ ವಿಳಾಸ ನೀಡಬೇಕು ಮತ್ತು ಕರ್ನಾಟಕದಿಂದ ನಿರ್ಗಮಿಸುವ ಚೆಕ್ ಪೋಸ್ಟ್.ನ ವಿವರಗಳನ್ನು ತಪ್ಪದೇ ನಮೂದಿಸಬೇಕು.

2. **ರಾಜ್ಯವನ್ನು ಪ್ರವೇಶಿಸುವ ಎಲ್ಲಾ ವ್ಯಕ್ತಿಗಳ ಆರೋಗ್ಯ ತಪಾಸಣೆಯನ್ನು ಆಗಮನದ ಕೇಂದ್ರಗಳಲ್ಲಿ ಮಾಡುವುದು.**
   a. ಗಡಿಭಾಗದ ಚೆಕ್ ಪೋಸ್ಟ್ ಗಳು, ವಿಮಾನ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮತ್ತು ಬಸ್ ನಿಲ್ದಾಣಗಳು.
   b. ಕ್ವಾರಂಟೈನ್ ಮಾನದಂಡಗಳಿಗನುಸಾರವಾಗಿ 14 ದಿನಗಳ ಹೋಂ ಕ್ವಾರಂಟೈನ್ ಕುರಿತು ಕೈಗೆ ಹೋಂ ಕ್ವಾರಂಟೈನ್ ಮುದ್ರೆಯನ್ನು ಮುಂಗೈಗೆ ಹಾಕುವುದು.

3. **ಕ್ವಾರಂಟೈನ್ ನಿಯಾಮವಳಿಗಳು:**
   **I. ಯಾವುದೇ ರಾಜ್ಯದ ಪ್ರಯಾಣಿಕರಿಗೆ ಆಗಮನದ ಸಂದರ್ಭದಲ್ಲಿ ರೋಗ ಲಕ್ಷಣಗಳಿದ್ದರೆ -**
   i. ಕೋವಿಡ್ ನಿಗಾ ಕೇಂದ್ರ (ಸಿಸಿಸಿ) / ನಿಗಧಿತ ಕೋವಿಡ್ ಆರೋಗ್ಯ ಕೇಂದ್ರ (ಡಿಸಿಹೆಚ್ ಸಿ)ದಲ್ಲಿ 07 ದಿನಗಳ ಕಾಲ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿರಿಸುವುದು, ತದನಂತರ 07 ದಿನಗಳ ಕಾಲ ಹೋಂ ಕ್ವಾರಂಟೈನ್ (ಅಥವಾ ರೋಗ ಲಕ್ಷಣಗಳಿಗನುಸಾರವಾಗಿ ನಿರ್ವಹಣೆ).

**ii. ಆಗಮಿಸಿದ ಕೂಡಲೇ ತಪಾಸಣೆ**

a. ಪಾಸಿಟಿವ್ ಬಂದರೆ ನಿಗಧಿತ ಕೋವಿಡ್ ಆಸ್ಪತ್ರೆ (ಡಿಸಿಹೆಚ್)ಗೆ ದಾಖಲಿಸುವುದು.

b. ನೆಗೆಟಿವ್ ಬಂದರೆ, ಮುಂದಿನ ತಪಾಸಣೆಯ ಅಗತ್ಯವಿರುವುದಿಲ್ಲ.

**II. ಆಗಮನದ ಸಂಧರ್ಭದಲ್ಲಿ ರೋಗ ಲಕ್ಷಣಗಳಿಲ್ಲದಿದ್ದರೆ.**

**A. <u>ಮಹಾರಾಷ್ಟ್ರದಿಂದ ಆಗಮಿಸುವವರಿಗೆ</u>**

a) 07 ದಿನಗಳ ಸಾಂಸ್ಥಿಕ ಕ್ವಾರಂಟೈನ್ ತದನಂತರ 07 ದಿನಗಳ ಹೋಂ ಕ್ವಾರಂಟೈನ್.

b) ಕ್ವಾರಂಟೈನ್ ಅವಧಿಯಲ್ಲಿ ರೋಗ ಲಕ್ಷಣಗಳು ಕಂಡುಬಂದರೆ ತಪಾಸಣೆ ಮಾಡುವುದು.

c) ರೋಗ ಲಕ್ಷಣಗಳಿಲ್ಲದ ವಿಶೇಷ ಪ್ರವರ್ಗದ ವ್ಯಕ್ತಿಗಳಿಗೆ ವಿನಾಯಿತಿಗಳು.

1. 21 ದಿನಗಳ ಹೋಂ ಕ್ವಾರಂಟೈನ್ (ಒಬ್ಬ ಸಹಾಯಕರಿಗೆ ಅನುಮತಿಯಿದೆ) ಪ್ರಕರಣದ ಆಧಾರದ ಮೇಲೆ ಜೊತೆಯಲ್ಲಿರಲು
2. ವಿಶೇಷ ಪ್ರವರ್ಗದ ಪ್ರಯಾಣಿಕರು
   i. ಕುಟುಂಬದ ಸದಸ್ಯರು ಮೃತರಾಗಿದ್ದರೆ.
   ii. ಗರ್ಭಿಣಿ ಮಹಿಳೆಯರು
   iii. ಹತ್ತು ವರ್ಷಕ್ಕಿಂತ ಕೆಳಗಿರುವ ಮಕ್ಕಳು
   iv. ಅರವತ್ತು ವರ್ಷದ ಮೇಲ್ಪಟ್ಟ ಹಿರಿಯ ನಾಗರೀಕರು
   v. ತೀವ್ರತರ ಅನಾರೋಗ್ಯದಿಂದ ಬಳಲುತ್ತಿರುವವರು.
   vi. ಮಾನವ ಯಾತನೆಗೊಳಗಾದವರು

d) **<u>ಮಹಾರಾಷ್ಟ್ರದಿಂದ ಬರುವ ವ್ಯವಹಾರಸ್ಥ ಪ್ರಯಾಣಿಕರು:</u>** ತಾವು ವ್ಯವಹಾರಸ್ಥರು ಎಂದು ನಿರೂಪಿಸಲು, ವ್ಯಕ್ತಿಯು ವಾಪಾಸಾಗುವ **ಖಾತ್ರಿಪಟ್ಟಿರುವ ವಿಮಾನ/ ರೈಲು ಟಿಕೆಟ್** ಅನ್ನು ತೋರಿಸಬೇಕು, ಅದು ಆಗಮನದ ದಿನಾಂಕದಿಂದ 7 ದಿನಗಳ ಒಳಗಿರಬೇಕು. ಒಂದು ವೇಳೆ ರಸ್ತೆಯ ಮೂಲಕ ಬರುತ್ತಿದ್ದರೆ, ಅವನು/ಅವಳು ಕರ್ನಾಟಕದಲ್ಲಿ ತಾವು ಭೇಟಿಯಾಗುವ ವ್ಯಕ್ತಿಯ ಗುರುತಿನ ಚೀಟಿಯನ್ನು ಒದಗಿಸಬೇಕು, ಅದರೊಂದಿಗೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಬೇಕು.

i. **2 ದಿನಗಳಿಗಿಂತ ಹಳೆಯದಲ್ಲದ ಕೋವಿಡ್ ನೆಗೆಟಿವ್ ಪರೀಕ್ಷಾ ಪ್ರಮಾಣಪತ್ರವನ್ನು ಯಾರು ಹೊಂದಿರುತ್ತಾರೋ** ಅವರಿಗೆ ಕ್ವಾರಂಟೈನ್‌ನಿಂದ ವಿನಾಯಿತಿ ಇರುತ್ತದೆ.

ii. **ಯಾರು ಕೋವಿಡ್ ನೆಗೆಟಿವ್ ಪರೀಕ್ಷಾ ಪ್ರಮಾಣಪತ್ರವನ್ನು ಹೊಂದಿಲ್ಲವೋ** ಅಂತಹ ವ್ಯಕ್ತಿಯು 2 ದಿನಗಳ ಸಾಂಸ್ಥಿಕ ಕ್ವಾರಂಟೈನ್‌ಗೆ ಹೋಗಬೇಕು ಅದರಲ್ಲಿಯೂ ಕೋವಿಡ್ ಪರೀಕ್ಷೆಯನ್ನು ಅವನ / ಅವಳ ಸ್ವಂತ ವೆಚ್ಚದಲ್ಲಿ ಕೈಗೊಳ್ಳಲಾಗುವುದು. ಪರೀಕ್ಷಾ ಫಲಿತಾಂಶವು ನೆಗೆಟಿವ್

ಎಂದು ಕಂಡು ಬಂದ ನಂತರ, ವ್ಯಕ್ತಿಯನ್ನು ಕ್ವಾರಂಟೈನ್‌ನಿಂದ ಮುಕ್ತಗೊಳಿಸಲಾಗುತ್ತದೆ.

ವ್ಯವಹಾರಸ್ಥ ಪ್ರಯಾಣಿಕರಿಗೆ ಅಂಗೈ ಮೇಲೆ ಮುದ್ರೆ ಒತ್ತುವ ಅವಶ್ಯಕತೆಯಿರುವುದಿಲ್ಲ.

e) **<u>ಮಹಾರಾಷ್ಟ್ರದಿಂದ</u> ರಾಜ್ಯದ ಮೂಲಕ ಹಾದುಹೋಗುವ ಪ್ರಯಾಣಿಕರು:** ರಾಜ್ಯದ ಮೂಲಕ ಹಾದುಹೋಗುವ ಪ್ರಯಾಣಿಕರೆಂದು ನಿರೂಪಿಸಲು, ವ್ಯಕ್ತಿಯು ಆಗಮನದ ದಿನಾಂಕದಿಂದ ಮುಂದಿನ 1 ದಿನಕ್ಕಿಂತ ಕಡಿಮೆ ಇರುವ **ಖಾತ್ರಿಪಟ್ಟಿರುವ ವಿಮಾನ/ ರೈಲು ಟಿಕೆಟ್** ಅನ್ನು ತೋರಿಸಬೇಕು, ಒಂದು ವೇಳೆ ವ್ಯಕ್ತಿಯು ರಸ್ತೆಯ ಮೂಲಕ ಪ್ರಯಾಣಿಸುತ್ತಿದ್ದರೆ ಅವನು/ಅವಳು ಗುರುತಿನ ದಾಖಲೆ ಮತ್ತು ಪ್ರಯಾಣಿಸುತ್ತಿರುವ ರಾಜ್ಯದ ವಿಳಾಸ ದಾಖಲೆ ಒದಗಿಸಬೇಕು. ಪ್ರಯಾಣಿಕನು ತನ್ನ ನಿರ್ಗಮನವನ್ನು ಆಯ್ದ ನಿರ್ಗಮನದ ಚೆಕ್-ಪೋಸ್ಟ / ರೈಲ್ವೆ ನಿಲ್ದಾಣ / ವಿಮಾನ ನಿಲ್ದಾಣದಲ್ಲಿ ದಾಖಲಿಸುವುದು. ರಸ್ತೆಯ ಮೂಲಕ ಪ್ರಯಾಣಿಸುವ ಅಂತಹ ಪ್ರಯಾಣಿಕರ ಅಂಗೈ ಮೇಲೆ ಮುದ್ರೆಯನ್ನು ಒತ್ತುವುದು.

**B. ಇತರೆ ರಾಜ್ಯಗಳಿಂದ ಆಗಮಿಸುವವರಿಗೆ**

a) 14 ದಿನಗಳ ಹೋಂ ಕ್ವಾರಂಟೈನ್

b) ಹೋಂ ಕ್ವಾರಂಟೈನ್ ಅವಧಿಯಲ್ಲಿ ರೋಗ ಲಕ್ಷಣಗಳು ಕಂಡುಬಂದರೆ ಪರೀಕ್ಷೆಗೊಳಪಡಿಸಬೇಕು.

c) ಹೋಂ ಕ್ವಾರಂಟೈನ್ ಸಾಧ್ಯವಾಗದ ವ್ಯಕ್ತಿಗಳಿಗೆ , ಸಾಂಸ್ಥಿಕ ಕ್ವಾರಂಟೈನ್ ಗೆ ಒಳಗಾಗಬೇಕು ಪ್ರಮುಖವಾಗಿ ಈ ಕೆಳಗಿನ ಸಂದರ್ಭಗಳಲ್ಲಿ -

1. ದೊಡ್ಡ ಕುಟುಂಬ ಅಥವಾ ಹೋಂ ಕ್ವಾರಂಟೈನ್ ಗೆ ಪ್ರತ್ಯೇಕ ಕೊಠಡಿಯಿಲ್ಲದ ಸಂದರ್ಭದಲ್ಲಿ
2. ಕೊಳಗೇರಿ ಪ್ರದೇಶಗಳು ಅಥವಾ ಹೆಚ್ಚು ಜನಸಂದಣಿಯಿರುವ ಪ್ರದೇಶಗಳಲ್ಲಿ ಹೋಂ ಕ್ವಾರಂಟೈನ್ ಅನ್ನು ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ

d) **ಇತರೆ ರಾಜ್ಯಗಳಿಂದ ಬರುವ ವ್ಯವಹಾರಸ್ಥ ಪ್ರಯಾಣಿಕರು:** ತಾವು ವ್ಯವಹಾರಸ್ಥರು ಎಂದು ನಿರೂಪಿಸಲು, ವ್ಯಕ್ತಿಯು ಹಿಂದಿರುಗುವ ಖಾತ್ರಿಪಟ್ಟಿರುವ ವಿಮಾನ/ ರೈಲು ಟಿಕೆಟ್ ಅನ್ನು ತೋರಿಸಬೇಕು, ಅದು ಆಗಮನದ ದಿನಾಂಕದಿಂದ 7 ದಿನಗಳಿಗಿಂತ ಹೆಚ್ಚು ಇರಬಾರದು. ಒಂದು ವೇಳೆ ರಸ್ತೆಯ ಮೂಲಕ ಬರುತ್ತಿದ್ದರೆ, ಅವನು / ಅವಳು ರಾಜ್ಯದಲ್ಲಿ ಭೇಟಿಯಾಗ ಬಯಸುವ ವ್ಯಕ್ತಿಯ ವಿಳಾಸದ ದಾಖಲೆಯನ್ನು ಒದಗಿಸುವುದು.

i. ಕ್ವಾರಂಟೈನ್ ಇರುವುದಿಲ್ಲ, ಮತ್ತು

ii. ಇತರೆ ರಾಜ್ಯಗಳಿಂದ ಬರುವ ವ್ಯವಹಾರಸ್ಥರಿಗೆ ಅಂಗೈಗೆ ಮುದ್ರೆಯ ಅಗತ್ಯವಿರುವುದಿಲ್ಲ.

e) **ಇತರೆ ರಾಜ್ಯಗಳಿಂದ ಹಾದುಹೋಗುವ ಪ್ರಯಾಣಿಕರು:** ರಾಜ್ಯದ ಮುಖೇನ ಹಾದುಹೋಗುವ ಪ್ರಯಾಣಿಕರೆಂದು ನಿರೂಪಿಸಲು, ವ್ಯಕ್ತಿಯು ಕಡ್ಡಾಯವಾಗಿ ಆಗಮಿಸಿದ ಅವಧಿಯಿಂದ 1 ದಿನಕ್ಕಿಂತ ಹೆಚ್ಚಿನ

ಅವಧಿಯಲ್ಲದ ಮುಂದಿನ ಪ್ರಯಾಣದ ವಿಮಾನ/ರೈಲು ಟಿಕೆಟ್‌ಗಳನ್ನು ಹಾಜರುಪಡಿಸತಕ್ಕದ್ದು. ಒಂದು ವೇಳೆ ವ್ಯಕ್ತಿಯು ರಸ್ತೆಯ ಮೂಲಕ ಪ್ರಯಾಣಿಸುತ್ತಿದ್ದರೆ ಅವನು/ಅವಳು ಪ್ರಯಾಣಿಸುತ್ತಿರುವ ರಾಜ್ಯದ ವಿಳಾಸ ಮತ್ತು ಗುರುತಿನ ದಾಖಲೆಗಳನ್ನು ಒದಗಿಸುವುದು.

ರಸ್ತೆಯ ಮೂಲಕ ಪ್ರಯಾಣಿಸುವ ಅಂತಹ ಪ್ರಯಾಣಿಕರ ಅಂಗೈ ಮೇಲೆ ಮುದ್ರೆಯನ್ನು ಒತ್ತಬೇಕು.

## 4. ಹೋಂ ಕ್ವಾರಂಟೈನ್: ಕಟ್ಟುನಿಟ್ಟಿನ ಕ್ರಮಗಳ ಜಾರಿ

ವ್ಯಾಪಾರದ ಸಲುವಾಗಿ ಆಗಮಿಸುವ ಮತ್ತು ರಾಜ್ಯದ ಮೂಲಕ ಹಾದುಹೋಗುವ ಪ್ರಯಾಣಿಕರನ್ನು ಹೊರತುಪಡಿಸಿ, ರಾಜ್ಯದ ಒಳಬರುವ ಎಲ್ಲ ವ್ಯಕ್ತಿಗಳು ಹೋಂ ಕ್ವಾರಂಟೈನ್ ಅನ್ನು ಅನುಸರಿಸುವುದು.

### A. ಗ್ರಾಮೀಣ ಪ್ರದೇಶಗಳಲ್ಲಿ

- ಮನೆಯ ಬಾಗಿಲಿಗೆ ಹೋಂ ಕ್ಯಾರೆಂಟೈನ್ ಭಿತ್ತಿಪತ್ರ ಅಂಟಿಸುವುದು
- ಇಬ್ಬರು ನೆರೆಹೊರೆಯವರಿಗೆ ಮಾಹಿತಿ ನೀಡುವುದು.
- ಹೋಂ ಕ್ವಾರಂಟೈನ್ ಕಾರ್ಯತಂತ್ರದ ನಿರ್ವಹಣೆಯ ಒಟ್ಟಾರೆ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಯು ನಿರ್ವಹಿಸುವುದು
- ಮೇಲ್ವಿಚಾರಣೆ ಮಾಡಲು ಪ್ರತಿಯೊಂದು ಹಳ್ಳಿಯಲ್ಲಿ 3 ಸದಸ್ಯರ ತಂಡವನ್ನು ರಚಿಸುವುದು.
- ಫ್ಲೈಯಿಂಗ್ ಸ್ಕ್ವಾಡ್: ಹೋಂ ಕ್ವಾರಂಟೈನ್ ಉಲ್ಲಂಘಿಸುವವರ ವಿರುದ್ಧ ಎಫ್ಐಆರ್ ದಾಖಲು ಮಾಡುವುದು ಮತ್ತು ಅಂತಹವರನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ವರ್ಗಾಯಿಸುವುದು.
- IVRS ಕಾಲ್-ಸೆಂಟರ್ ಮುಖಾಂತರ ಕರೆ ಮಾಡಿ ನಿಗಾವಹಿಸುವುದು.
- ಕ್ಯಾರೆಂಟೈನ್ ವಾಚ್ ಅಪ್ಲಿಕೇಶನ್ ಮೂಲಕ ವ್ಯಕ್ತಿಗಳ ತಾಪಮಾನ, ವಯಸ್ಸಾದವರಿಗೆ ಮತ್ತು ಸಹ-ಅಸ್ವಸ್ಥತೆವುಳ್ಳವರಿಗೆ ಬೆರಳು-ತುದಿಯ ನಾಡಿ-ಆಕ್ಸಿಮೆಟ್ರಿ ಮೂಲಕ ಸ್ವಯಂ ಮೇಲ್ವಿಚಾರಣಾ ಮಾಹಿತಿಯನ್ನು ಪ್ರತಿದಿನ ತಂತ್ರಾಂಶಕ್ಕೆ ಇಂಧೀಕರಿಸುವುದು (upload).

### B. ಬಿಬಿಎಂಪಿ ಮತ್ತು ಇತರ ನಗರ ಪ್ರದೇಶಗಳು

- ಮನೆಯ ಬಾಗಿಲಿಗೆ ಹೋಂ ಕ್ಯಾರೆಂಟೈನ್ ಭಿತ್ತಿಪತ್ರ ಅಂಟಿಸುವುದು
- ಇಬ್ಬರು ನೆರೆಹೊರೆಯವರಿಗೆ ಮಾಹಿತಿ ನೀಡುವುದು.
- ಹೋಂ ಕ್ವಾರಂಟೈನ್ ಕಾರ್ಯತಂತ್ರದ ನಿರ್ವಹಣೆಯ ಒಟ್ಟಾರೆ ಜವಾಬ್ದಾರಿಯನ್ನು ವಾರ್ಡ್ ಮಟ್ಟದ ತಂಡ ನಿರ್ವಹಿಸುವುದು
- ಮೇಲ್ವಿಚಾರಣೆ ಮಾಡಲು ನಿವಾಸಿಗಳ ಕಲ್ಯಾಣ ಸಂಘಗಳ / ಅಪಾರ್ಟ್.ಮೆಂಟ್ ಮಾಲೀಕರ ಸಂಘಗಳ ಪಾಲ್ಗೊಳ್ಳುವಿಕೆಯೊಂದಿಗೆ ಬೂತ್ ಮಟ್ಟದಲ್ಲಿ 3 ಸದಸ್ಯರ ತಂಡ ರಚಿಸುವುದು.
- ಫ್ಲೈಯಿಂಗ್ ಸ್ಕ್ವಾಡ್: ಹೋಂ ಕ್ವಾರಂಟೈನ್ ಉಲ್ಲಂಘಿಸುವವರ ವಿರುದ್ಧ ಎಫ್ಐಆರ್ ದಾಖಲು ಮಾಡುವುದು ಮತ್ತು ಅಂತಹವರನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ವರ್ಗಾಯಿಸುವುದು.
- IVRS ಕಾಲ್-ಸೆಂಟರ್ ಮುಖಾಂತರ ಕರೆ ಮಾಡಿ ನಿಗಾವಹಿಸುವುದು.

- ಕ್ಯಾರೆಂಟೈನ್ ವಾಚ್ ಅಪ್ಲಿಕೇಶನ್ ಮೂಲಕ ವ್ಯಕ್ತಿಗಳ ತಾಪಮಾನ, ವಯಸ್ಸಾದವರಿಗೆ ಮತ್ತು ಸಹ-ಅಸ್ವಸ್ಥತೆವುಳ್ಳವರಿಗೆ ಬೆರಳು-ತುದಿಯ ನಾಡಿ-ಆಕ್ಸಿಮೆಟ್ರಿ ಮೂಲಕ ಸ್ವಯಂಮೇಲ್ವಿಚಾರಣಾ ಮಾಹಿತಿಯನ್ನು ಪ್ರತಿದಿನ ತಂತ್ರಾಂಶಕ್ಕೆ ಇಂಧೀಕರಿಸುವುದು (upload).

5. **<u>ರೋಗ ಲಕ್ಷಣವಿರುವ ಮತ್ತು ILIs ವ್ಯಕ್ತಿಗಳು ಆಪ್ತಮಿತ್ರ ಸಹಾಯವಾಣಿ (14410)ಗೆ ಕರೆ ಮಾಡುವುದು:</u>** ಯಾರು ಹೋಂ ಕ್ವಾರಂಟೈನ್ ಅನುಸರಣೆಯಲ್ಲಿರುವರೋ ಅಥವಾ ಕೋವಿಡ್-19 ರೋಗ ಲಕ್ಷಣಗಳು ಕಂಡುಬಂದರೆ, 24x7 ಉಚಿತ ಸಹಾಯವಾಣಿ ಆಪ್ತಮಿತ್ರಗೆ ಕರೆಮಾಡಿ ಟೆಲಿಮೆಡಿಸಿನ್ ಸಹಾಯ ಪಡೆದುಕೊಳ್ಳತಕ್ಕದ್ದು, ಅಂತಹವರನ್ನು ಜ್ವರ ಕೇಂದ್ರಗಳಿಗೆ ಮುಂದಿನ ಚಿಕಿತ್ಸೆ ಮತ್ತು ಕೋವಿಡ್-19 ಪರೀಕ್ಷೆಗೆ ಕಳುಹಿಸುವುದು.

## 6. ಸಾರ್ವಜನಿಕರ, ನಿವಾಸಿ ಕಲ್ಯಾಣ ಸಂಘಗಳ ಮತ್ತು ವಾಣಿಜ್ಯ ಸಂಸ್ಥೆಗಳ ಪಾತ್ರ:

6.1 ಎಲ್ಲಾ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಚೇರಿಗಳು, ಕಾರ್ಖಾನೆಗಳು, ಮಾಲ್‌ಗಳು, ಧಾರ್ಮಿಕ ಸ್ಥಳಗಳು, ಹೋಟೆಲ್‌ಗಳು ಇತ್ಯಾದಿಗಳು ತಮ್ಮ ಎಲ್ಲಾ ಗ್ರಾಹಕರು ಅಥವಾ ಸಂದರ್ಶಕರು ಆವರಣಕ್ಕೆ ಪ್ರವೇಶಿಸುವ ಮೊದಲು ಕ್ವಾರಂಟೈನ್ ಮುದ್ರೆಯನ್ನು (ಅವರ ಕೈಯ ಹಿಂಭಾಗದಲ್ಲಿ) ಪರಿಶೀಲಿಸಬೇಕಾಗುತ್ತದೆ. ಈ ಸಂಸ್ಥೆಯವರು ಕ್ವಾರಂಟೈನ್ ಮುದ್ರೆಯನ್ನು ಹೊಂದಿರುವವರನ್ನು ಅವರ ಕ್ವಾರಂಟೈನ್ ಅವಧಿ ಮುಕ್ತಾಯವಾಗುವವರೆಗೂ ಅಥವಾ ಅವರ ಕೋವಿಡ್ ತಪಾಸಣೆಯಲ್ಲಿ ನೆಗೆಟಿವ್ ವರದಿ ಸ್ವೀಕೃತವಾಗುವವರೆಗೂ ಪ್ರವೇಶಿಸಲು ಅವಕಾಶ ನೀಡಬಾರದು. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಪೊಲೀಸರಿಗೆ ದೂರವಾಣಿ ಸಂಖ್ಯೆ 100 ರಲ್ಲಿ ಉಲ್ಲಂಘನೆಗಳ ಬಗ್ಗೆ ಮಾಹಿತಿ ನೀಡುವುದು.

6.2 ಸಾರ್ವಜನಿಕರು ಮತ್ತು ನಿವಾಸಿ ಕಲ್ಯಾಣ ಸಂಘಗಳು ತಮ್ಮ ನೆರೆಹೊರೆಯಲ್ಲಿರುವ ಯಾವುದೇ ವ್ಯಕ್ತಿಗಳು ಕ್ವಾರಂಟೈನನ್ನು ಉಲ್ಲಂಘಿಸಿದಲ್ಲಿ ಪೊಲೀಸರಿಗೆ ದೂರವಾಣಿ ಸಂಖ್ಯೆ 100 ರಲ್ಲಿ ಮಾಹಿತಿ ನೀಡುವುದು.

ಟಿ.ಎಂ. ವಿಜಯ್ ಭಾಸ್ಕರ್

**(ಟಿ.ಎಂ. ವಿಜಯ್ ಭಾಸ್ಕರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು